


# ಬಡಿವಾರ, ಆಮಿಷ ಮತ್ತು ಕ್ರೌರ್ಯಗಳ ಕಾಲ

ಎಂ.ಎಸ್. ಆಶಾದೇವಿ

ಈ ಕಾಲದ ಕಥನ

ನಿಂತ ಹೆಜ್ಜೆಯನರಿಯದ ಮುಂದಣ ಹೆಜ್ಜೆಯನಿಡಲಾಗದು ಎನ್ನುವುದು ಅದೆಷ್ಟು ಸರಳವಾಗಿ ಕಾಣುತ್ತದೋ ಅಷ್ಟೇ ಸಂಕೀರ್ಣವಾದದ್ದೂ ಹೌದು.

ಹಳಹಳಿಕೆಯಿಲ್ಲದೆ, ಮುಗ್ಧ ರಮ್ಯತೆಯೂ ಅಲ್ಲದ, ಶುಷ್ಕ, ನಿರ್ಭಾವುಕ ವಾಸ್ತವತೆಯೂ ಅಲ್ಲದ ನೆಲೆಯಲ್ಲಿ ನಾವು ಬದುಕುತ್ತಿರುವ ಕಾಲವನ್ನು, ಅದರ ಚಲನೆಗಳನ್ನು ಗ್ರಹಿಸುವುದು ಸಾಧ್ಯವೆ? ನಾವು ಬದುಕುತ್ತಿರುವ, ಅದರ ಭಾಗೀದಾರರೂ, ಫಲಾನುಭವಿಗಳೂ, ಬಲಿಪಶುಗಳೂ ಆಗಿರುವ ಕಾಲಕ್ಕೆ ಕನ್ನಡಿ ಹಿಡಿಯುವುದು, ಕಂಡ ಚಿತ್ರವನ್ನು ಭಾವೋದ್ವೇಗವಿಲ್ಲದೆ ನೋಡುವುದು ಕಷ್ಟ. ನಾವು ನಂಬಿದ ತಾತ್ವಿಕತೆಯೋ ನಮ್ಮನ್ನು ಕೈಹಿಡಿದು ನಡೆಸುವ ನಂಬಿಕೆಗಳೋ ನಮ್ಮನ್ನು ನಮಗೆ ಬೇಕಾದ ಹಾಗೆ ನೋಡುವಂತೆ ಒತ್ತಾಯಿಸುತ್ತವೆ.

**Time present**
**and Time pastare both**
**perhaps present in time future**

ಎನ್ನುವ ಎಲಿಯೆಟ್ ಏನ ಮಾತುಗಳೂ ಕೂಡ ವರ್ತಮಾನವನ್ನು ಅದರ ಸಾತತ್ಯದಲ್ಲಿಯೂ, ಹಿಂದು ಮುಂದುಗಳ ಸಾವಯವ ಕೊಂಡಿಯಲ್ಲಿ ಹಿಡಿಯುವ ಪ್ರಯತ್ನವೆ?

ಈ ಎಲ್ಲವೂ ಇದ್ದೂ ನಮ್ಮ ಕಾಲವನ್ನು ಪ್ರಭಾವಿಸುತ್ತಿರುವ, ನಿರ್ದೇಶಿಸುತ್ತಿರುವ ಸಂಗತಿಗಳು ಇದ್ದೇ ಇರುತ್ತವೆ ಎನ್ನುವುದೂ ಅಷ್ಟೇ ಸತ್ಯ.

ಕೆಲವು ದಿನಗಳ ಹಿಂದೆ ವಾಟ್ಸ್‌ಆ್ಯಪ್‌ನಲ್ಲಿ ಕಾಣಿಸಿಕೊಂಡ ಚಿತ್ರವೊಂದು ನೆನಪಾಗುತ್ತಿದೆ. ಅಂಬಾನಿ ಕುಟುಂಬದವರು ದೇವರಿಗೆ ಕೈ ಮುಗಿದು ಕೇಳುತ್ತಿದ್ದಾರೆ, 'ಭಗವಾನ್, ಕುಚ್ ಚಾಯಿಯೇ ತೋ ಬತಾದೇನಾ'. ನಮ್ಮ ಕಾಲದ ಬಗ್ಗೆ ಬರೆದ ಭಾಷ್ಯವಾಗಿ, ರೂಪಕವಾಗಿ ಇದು ನನಗೆ ಕಂಡಿತು. ಅಂಬಾನಿ ಕುಟುಂಬ ದೇವರನ್ನು ಹೀಗೆ ಪ್ರಾರ್ಥಿಸುತ್ತಿದೆ ಎನ್ನುವುದಕ್ಕಿಂತ ನಾವೆಲ್ಲರೂ ಹೀಗೆ ಪ್ರಾರ್ಥಿಸಬಲ್ಲ 'ಸ್ಥಿತಿ'ಯನ್ನು